**ದಿನಾಂಕಃ 29-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ** ಅರ್ಜಿದಾರರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆ ಏನು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಪಿ ಕೆ ಎಸ್ .ವಕೀಲರಿಂದಃ**

1. ನನ್ನ ಹೊಂಡಾ ಶೈನ್ ದ್ವಿಚಕ್ರ ವಾಹನದ ನೋಂದಣಿ ಸಂಖ್ಯೆ ಕೆ ಎ 35 ಇಪಿ 7458 ಆಗಿರುತ್ತದೆ. ಸದರಿ ವಾಹನಕ್ಕೆ ಇನ್ಸುರೆನ್ಸ ಪಾಲಸಿ ಇತ್ತು. ಶೋಂ ರೂಂ ನಲ್ಲಿ ಬೈಕ್ ಖರೀದಿ ಮಾಡುವಾಗಲೇ ಇನ್ಸುರೆನ್ಸ ಪಾಲಸಿ ಮಾಡಿಸಿದ್ದೆ, ಯಾವ ಕಂಪನಿಯೆಂದು ನನಗೆ ಗೊತ್ತಿರುವುದಿಲ್ಲ. ನನ್ನ ಇನ್ಸುರೆನ್ಸ ಕಂಪನಿಯಲ್ಲಿ ಡ್ಯಾಮೆಜಸ್ ಕ್ಲೈಮ್ ಮಾಡಿರುವುದಿಲ್ಲ. ನನ್ನ ಇನ್ಸುರೆನ್ಸ ಕಂಪನಿಯಲ್ಲಿ ನಾನು ಯಾವುದೇ ಕ್ಲೈಮ್ ಮಾಡಿಲ್ಲ ಎಂದು ಸದರಿ ಇನ್ಸುರೆನ್ಸ ಕಂಪನಿಯವರನ್ನು ಸಾಕ್ಷಿ ಮಾಡಲು ಯಾವುದೇ ತೊಂದರೆ ಇರುವುದಿಲ್ಲ. ಅಪಘಾತವಾದ ತಕ್ಷಣ ನನ್ನ ಮೋಟಾರ್ ಸೈಕಲ್ ಸರ್ವೆ ಮಾಡಿಸಿದ್ದೆ. ನನ್ನ ಮೋಟಾರ್ ಸೈಕಲ್ ನ್ನು ಶೋ ರೂಂ ನಲ್ಲಿ ರಿಪೇರಿ ಮಾಡಿಸಿರುವುದಿಲ್ಲ, ಸಾಗರ ಮೋಟರ್ಸ ದಾವಣಗೆರೆಯಲ್ಲಿ ರಿಪೇರಿ ಮಾಡಿಸಿರುತ್ತೇನೆ. ಸಾಗರ ಮೋಟರ್ಸ ರವರು ಹೊಂಡಾ ಶೈನ್ ಬೈಕ್ ಗಳ ಅಧೀಕೃತ ಡೀಲರ್ ಅಲ್ಲ ಎಂದರೆ ಸರಿಯಲ್ಲ. ರಿಪೇರಿ ಹಣವನ್ನು ನಾನು ನಗದಾಗಿ ಪಾವತಿ ಮಾಡಿರುತ್ತೇನೆ.

2. ಅಜಯ್ ಆಟೋ ಮೊಬೈಲ್ ಮತ್ತು ಸಾಗರ ಮೋಟರ್ಸ ರವರನ್ನು ಕರೆಯಿಸಿ ಸಾಕ್ಷಿ ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ. ಬೈಕ್ ಖರೀದಿ ಮಾಡಿ 2-3 ವರ್ಷಗಳಲ್ಲಿ ಅಪಘಾತ ಆಗಿರುತ್ತದೆ. ಬೈಕ್ ಖರೀದಿ ಮಾಡಿದ ಬಗ್ಗೆ ಇನ್ ವೈಸ್ ಹಾಜರು ಪಡಿಸಿರುವುದಿಲ್ಲ. ಅಧೀಕೃತ ಸರ್ವಿಸಿಂಗ್ ಸೆಂಟರ್ ನಲ್ಲಿ ರಿಪೇರಿ ಮಾಡಿಸಿದರೆ ಹೆಚ್ಚು ಬಿಲ್ ಬರುವುದಿಲ್ಲ ಎಂದು ಬೇರೆ ಕಡೆ ರಿಪೇರಿ ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ಹೇಳಿರುವ ಬಿಡಿ ಭಾಗಗಳನ್ನು ಜೋಡಿಸಿದ ನಂತರ ಹಳೆ ಬಿಡಿ ಭಾಗಗಳನ್ನು ಏನು ಮಾಡಿದ್ದೀರಾ ಎಂದರೆ ಸಾಕ್ಷಿ ಸಾಗರ ಮೋಟರ್ಸ ನಲ್ಲಿ ಇರುತ್ತವೆ ಅವೆಲ್ಲ ಡ್ಯಾಮೇಜ್ ಆಗಿದ್ದವು ಎಂದು ಹೇಳುತ್ತಾರೆ. ಜಕಂ ಆದ ಬಿಡಿ ಭಾಗಗಳನ್ನು ಹಾಜರು ಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತೊಂದರೆ ಇಲ್ಲ ಎಂದು ಹೇಳುತ್ತಾರೆ. ಉದ್ದೇಶ ಪೂರ್ವಕವಾಗಿ ಹೆಚ್ಚು ಹಣ ಕ್ಲೈಮ್ ಮಾಡುವುದಕ್ಕಾಗಿ ಡ್ಯಾಮೇಜ್ ಆಗದೇ ಇದ್ದರೂ ಸಹ ಹೆಚ್ಚು ಮೊತ್ತದ ಬಿಲ್ ತಂದು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5

ರಲ್ಲಿ ನಮೂದಾಗಿರದ ಬಿಡಿ ಭಾಗಗಳನ್ನು ನಿಪಿ-7 ರಲ್ಲಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ಮತ್ತು 8 ಸುಳ್ಳು ಬಿಲ್ ಗಳು ಎಂದರೆ ಸರಿಯಲ್ಲ. 2 ನೇ ಇನ್ಸುರೆನ್ಸ ಕಂಪನಿಯವರಿಂದ ಪರಿಹಾರ ಹಣ ಪಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಠಿ ಮಾಡಿ ಹಾಜರು ಪಡಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವ ಕಾಲಕ್ಕೆ ಅಂದರೆ ದಿಃ 27-09-2023 ರಂದು ನಿಪಿ-7 ಮತ್ತು 8 ದಾಖಲೆಗಳು ನನ್ನ ಬಳಿ ಇದ್ದವು . ಸದರಿ ನಿಪಿ-7 ಮತ್ತು 8 ದಾಖಲೆಗಳನ್ನು ಪರಿಹಾರದ ಅರ್ಜಿ ಸಲ್ಲಿಸುವ ಕಾಲಕ್ಕೆ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ .

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.